C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No. 2/2024 ಪಿ.ಡಬ್ಲ್ಯೂ-3 ಸಿ.ಡಬ್ಲ್ಯೂ-3

ದಿನಾಂಕಃ- 27.01.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಧುಸೂದನ |
| ಗಂಡನ ಹೆಸರು | ಲಕ್ಷ್ಮಣ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಪಾಲಹಳ್ಳಿ ಗ್ರಾಮ,<br>ಶ್ರೀರಂಗಪಟ್ಟಣ ತಾಲ್ಲೂಕು. |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನಗೆ ನಮ್ಮ ಊರಿನ ಗಿರೀಶ ರವರ ಬಗ್ಗೆ ಗೊತ್ತಿದೆ.

2. ನನಗೆ ಈ ಪ್ರಕರಣದ ಆರೋಪಿತರಾದ ನಾಗೇಂದ್ರ ಮತ್ತು ಗಿರೀಶ ರವರ ಬಗ್ಗೆ ಗೊತ್ತಿದೆ.

3.ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ.

4. ನಾನು ಈ ಪ್ರಕರಣದ ಆರೋಪಿತರ ಮನೆ ಅಥವಾ ಅವರ ಮಾಲೀಕತ್ವದ ಜಮೀನನ್ನು ನೋಡಿಲ್ಲ.

5. ಈ ಸಾಕ್ಷಿ ನಿಪಿ-4 ರಲ್ಲಿ ಗುರುತಿಸಿರುವ ಮಹಜರು, ನಿಪಿ-9 ರಲ್ಲಿ ಗುರುತಿಸಿರುವ ವಸ್ತುಗಳ ಪಟ್ಟಿ, ನಿಪಿ-11 ರಲ್ಲಿ ಗುರುತಿಸಿರುವ ನೋಟೀಸು, ಮತ್ತು ನಿಪಿ-12 ರಲ್ಲಿ ಗುರುತಿಸಿರುವ ಮಾದರಿ ಸೀಲಿನ ನಕಲು ದಾಖಲೆಗಳ ಮೇಲೆ ತನ್ನ

ಸಹಿಗಳು ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ–4(ಸಿ), 9(ಸಿ), 11(ಬಿ) ಮತ್ತು 12(ಸಿ) ಎಂದು ಗುರುತಿಸಲಾಯಿತು.

6. ನಾನು ಇವತ್ತಿಗೆ ಸುಮಾರು 3 ವರುಷಗಳ ಹಿಂದೆ ಶ್ರೀರಂಗಪಟ್ಟಣದಲ್ಲಿ ಕಾವೇರಿ ಶಾಲೆಯ ಹತ್ತಿರ ಇರುವ ಬಸ್ಸು ನಿಲ್ದಾಣದ ಹತ್ತಿರ ಅಬಕಾರಿ ಇಲಾಖೆಯ ಅಧಿಕಾರಿಗಳ ಹೇಳಿಕೆ ಮೇರೆಗೆ ನಿಪಿ–4(ಸಿ), 9(ಸಿ), 11(ಬಿ) ಮತ್ತು 12(ಸಿ) ರಲ್ಲಿ ಗುರುತಿಸಿರುವ ಸಹಿಗಳನ್ನು ಮಾಡಿದ್ದೇನೆ.

7. ನನ್ನ ಸಮಕ್ಷಮ ಅಬಕಾರಿ ಇಲಾಖೆಯ ಅಧಿಕಾರಿಗಳು ಯಾವುದೇ ರೀತಿಯ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಏನು ವಿಚಾರ ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ.

8. ನಾನು ಅಬಕಾರಿ ಇಲಾಖೆಯ ಅಧಿಕಾರಿಗಳ ಸಮಕ್ಷಮ ದಿಃ 19.04.2023 ರಂದು ಪಾಲಹಳ್ಳಿ ಗ್ರಾಮ ಹೋಗುತ್ತಿದ್ದ ನನಗೆ ............................................................. ಆರೋಪಿಯನ್ನು ಕರೆದುಕೊಂಡು ಅಲ್ಲಿಂದ ತೆರಳಿದರು ಎಂದು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪರವಾನಗಿ ಕೊಡಲಾಯಿತು)

<u>ಪಾಟೀ ಸವಾಲುಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>

1. ದಿಃ 19.04.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಸ.ನಂ 273/1 ನೇ ಜಮೀನಿನಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮನೆಯ ಹಿಂಭಾಗದಲ್ಲಿರುವ ಜಾಗದಲ್ಲಿ ಅಬಕಾರಿ ಅಧಿಕಾರಿಗಳು 25 ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಆರೋಪಿತರನ್ನು ಹಿಡಿದು ಮಹಜರು ತಯಾರಿಸಿದಾಗ ನಾನು ಸ್ಥಳದಲ್ಲಿ ಹಾಜರಿದ್ದು ಮಹಜರಿನಲ್ಲಿ ಬರೆದಿರುವ

ವಿಚಾರಗಳನ್ನು ತಿಳಿದುಕೊಂಡು ನಿಪಿ-4(ಸಿ) ರಲ್ಲಿ ಗುರುತಿಸಿರುವ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

2. ನಾನು 11.07.2023 ರಂದು ಅಬಕಾರಿ ಅಧಿಕಾರಿಗಳ ಸಮಕ್ಷಮ ನಿಪಿ.21 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ದಿಃ 19.04.2023 ರಂದು ಪಾಲಹಳ್ಳಿ ಗ್ರಾಮ ಹೋಗುತ್ತಿದ್ದ ನನಗೆ ............................................................ ಆರೋಪಿಯನ್ನು ಕರೆದುಕೊಂಡು ಅಲ್ಲಿಂದ ತೆರಳಿದರು ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

3. ನಾನು ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಸಿ. ಮೂರ್ತಿ ವಕೀಲರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

<u>ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.